ಶ್ರೀ ಎಂ. ವೈ. ಘೋರ್ಪಡೆ.—ಇಲ್ಲಿ ನೂರು ರೂಪಾಯಿ ಕೊಡುವ ಪ್ರಶ್ನೆಯೇ ಬರುವುದಿಲ್ಲ. ಒಂದು ವೇಳೆ ಅಂಥಾದ್ದು ನಡೆದಿದ್ದು ತಮ್ಮ ಗಮನಕ್ಕೆ ತಂದರೆ ತೀವ್ರವಾದ ಶಿಕ್ಷೆಯನ್ನು ಅಧಿಕಾರಿಗಳಿಗೆ ಕೊಡುತ್ತೇವೆ; ಅದರಲ್ಲಿ ಅನುಮಾನ ಬೇಡ. 2500 ರೂಪಾಯಿಗಳನ್ನು ಮನೆ ಕಟ್ಟುವುದ ಕೋನ್ಯರ ಕೊಡುತ್ತೇವೆ, ಅದರಲ್ಲಿ 500 ರೂಪಾಯಿಗಳನ್ನು ಲೇಬರ್ ಲೆಕ್ಕಕ್ಕೆ ತೆಗೆದುಕೊಳ್ಳುತ್ತೇವೆ.

ಮತ್ತೆ ಹೇಳುವುದಾದರೆ ತಮ್ಮ ತಾಲ್ಲೂಕಿನಲ್ಲಿ ಎರಡನೇ ಸೀರೀಸ್‌ನಲ್ಲಿ 120 ಮನೆಗಳ ಹೈಕಿ 115 ಮನೆಗಳನ್ನು ಪೂರ್ತಾ ಮಾಡಿದ್ದೇವೆ. ಇಷ್ಟೇ ಅಲ್ಲದೆ ಮೂರನೇ ಸೀರೀಸ್‌ನಲ್ಲಿ ಪುನಃ 100 ಮನೆಗಳನ್ನೆ ಮಂಜೂರು ಮಾಡಿದ್ದೇವೆ. ಅದನ್ನು ಅದಷ್ಟು ಬೇಗ ಕಟ್ಟಿಸಬೇಕು. ಇದಕ್ಕೆ ತಮ್ಮ ಸಹಾಯ ಸಹಕಾರ ಬೇಕು. ಎಲ್ಲಿಯಾದರೂ ಕೂಡ ತಾವು ಈಗ ಏನು ಹೇಳಿದಿರಿ ಅರೀತಿ ಅಕ್ರಮ ಅನ್ಯಾಯ ನಡೆದಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

1-30 P. M.

ಅಧ್ಯಕ್ಷರು.—ಶ್ರೀ ರಾಮಸ್ವಾಮಿ ಅವರ ಪ್ರಶ್ನೆ ನಂ.297, ಶ್ರೀ ಜಯಪ್ರಕಾಶ್ ನಾರಾಯಣ ಅವರು ಕೇಳಬಹುದು.

Removal of Banana Plants Planted by a Harijan

(297) SRI M. H. JAYAPRAKASH NARAYAN (Sirsi) [on behalf of SRI M. B. RAMASWAMY (Anekal)].—

Will the Minister for Agriculture and Animal Husbandry be pleased to state:—

(a) whethor Government is aware of the incident relating to the removal of banana plants belonging to a harijan of Sidi Hosakote Village of Anekal Taluk by a Government Official and his supporters ;

(b) if so, the steps taken to protect the minorities from such Government Officials ?

SRI N. HUTCHMASTI GOWDA (Minister for Revenue) (on behalf of

SRI N. CHIKKE GOWDA (Minister for Agriculture and Animal Husbandry.—)

(a) Yes. It is a fact that about 200 banana plants planted by a Harijan of Sidi Hosakote Village, Anekal Taluk who is a tenant have been removed by the landlord, a Government official working in the Department of Agriculture .

(b) The persons responsible have been charge sheeted and the case is pending trial in the Court of Chief Judicial Magistrate, Bangalore in No. 550/75

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, (ಅ)ಗೆ ಉತ್ತರವಾಗಿ ಗೌರವಾನ್ವಿತರು ಅಂತ ಹೇಳಿದ್ದೀರಿ. ಈ ನತದೃಷ್ಟ ಹರಿಜನನನ್ನು ಚೆನ್ನಾಗಿ ಒದ್ದು ಹಿಂಸಾತ್ಮಕ ಮಾಡಿದ್ದಾರೆ. ನಿಮ್ಮ ವರದಿ ಪ್ರಕಾರ ಈ ಬಗ್ಗೆ ಮೊಕದ್ದಮೆಯು ಬೆಂಗಳೂರಿನಲ್ಲಿರುವ ಪ್ರಧಾನ ದಂಡಾಧಿಕಾರಿ ನ್ಯಾಯಾಲಯದ ಮುಂದೆ 550/75ನೇ ಕ್ರಮಾಂಕದ ಪ್ರಕರಣದಲ್ಲಿ ವಿಚಾರಣೆಯಲ್ಲಿದೆ ಅಂತ ಇದೆ. ಈ ಬಗ್ಗೆ ನಾನು ಕೇಳುವುದು ಅವನನ್ನು ಒದ್ದವರಾರು, ಆ ಗುಂಪು ಯಾವುದು, ಈ ದೌಂಡಾವರ್ತನೆ ಮಾಡಿದಂಥ ಗೇಣಿದಾರನು ಸರ್ಕಾರಿ ಉದ್ಯೋಗಸ್ಥನಾಗಿರುವುದರಿಂದ ಅವನನ್ನು ಏನಾದರೂ ಸಸ್ಪೆಂಡ್ ಮಾಡಿದ್ದೀರಾ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರನ್ನು ಒದ್ದವರಾರು, ಆ ಗುಂಪು ಯಾವುದು ಅನ್ನುವುದನ್ನು ಹೇಳುವುದಕ್ಕೆ ಆ ವಿವರ ಈಗ ನನ್ನಲ್ಲಿ ಇಲ್ಲ, ಇದು ಕೋರ್ಟಿನ ಮುಂದೆ ಇದೆ ಅವನು ಜೈಸ್ ಪಾಸ್ ಮಾಡಿದ್ದಾನೆ. ಆದುದರಿಂದ ಆ ಕೇಸು ಬೆಂಗಳೂರಿನಲ್ಲಿರುವ ಪ್ರಧಾನ ದಂಡಾಧಿಕಾರಿ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿದೆ. ಅವನ ಪರವಾಗಿ ಅವನ ಮಗ ಮತ್ತು ಇನ್ನೂ ಇತರರು ಇದ್ದಾರೆ. ಅವನ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವ ವಿವರ ಈಗ ನನ್ನಲ್ಲಿ ಇಲ್ಲ.

ಶ್ರೀ ಎಂ. ಪೆಚ್. ಜಯಪ್ರಕಾಶ್ ನಾರಾಯಣ್.—ಅವನು ಈ ರೀತಿ ದೊಂಡಾವರ್ತನೆ ಮಾಡಿದ್ದುದರಿಂದ ಆತನ ಮೇಲೆ ಕೇಸ್ ಹಾಕಿದ್ದಾರೆ ಸರಿ ಆದರೆ ಅವನ ಹೆಸರೇನು ? ಅವನು ಸರ್ಕಾರೀ ನೌಕರನಾಗಿರುವುದರಿಂದ ಅವನು ಈ ತರಹ ದೊಂಡಾವರ್ತನೆ ಮಾಡಿದರೆ ಅವನ ಮೇಲೆ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ? ಯಾರ ಹೆಸರಿನಲ್ಲಿ ಖಾತೆ ಇದೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವನ ಹೆಸರು ಬಿ. ರಾಮಸ್ವಾಮಿ ಅಂತ. ಅವನು ಹಾರ್ಟಿಕಲ್ಚರ್ ಇರಾಖೆಯ ನೌಕರ. ಖಾತೆ ಇರುವುದು ಮೈನರ್ ಹುಡುಗನ ಹೆಸರಿನಲ್ಲಿ ಇದೆ. ಅವನ ಹೆಸರು ವೆಂಕಟಾಚಲ ಅಂತ. ಅವನು ಏನು ಅಪರಾಧ ಮಾಡಿದ್ದಾನೆ ಅದು ಕೋರ್ಟಿನಲ್ಲಿ ಇದೆ ಅದರ ಪೂರ್ಣ ವಿವರ ಈಗ ನನ್ನಲ್ಲಿ ಇಲ್ಲ ಒಂದು ಕಡೆ ಆ ನೌಕರನ ಮೇಲೆ ಕ್ರಮ ತೆಗೆದುಕೊಂಡಿರುವುದು ರೆವಿನ್ಯೂ ಇಲಾಖೆಯ ಮತ್ತೊಂದು ಕಡೆ ಆ ಕೇಸು ಕೋರ್ಟಿನಲ್ಲಿ ನಡೆಯುತ್ತಾ ಇದೆ. ಅವನ ಚೆನೆಂಟ್ ಚಿಕ್ಕಮುನಿಯಪ್ಪ. ಫಾರಂ 7ರ ಪ್ರಕಾರ ಆ ಕೇಸು ಟ್ರಿಬ್ಯೂನರ್ ಮುಂದೆ ಇದೆ. ಈ ರೀತಿಯಾಗಿ ಅವರದ್ದು 2 ಕೇಸು ಇದೆ. ಅದು ವಿಚಾರಣೆ ನಡೆಯುತ್ತಾ ಇದೆ.

ಶ್ರೀ ವಿ. ಎನ್. ಪಾಟೀಲ್.—ಸ್ವಾಮಿ- ತಾವು ಅದರ ಖಾತೆ ಮೈನರ್ ಹುಡುಗನ ಹೆಸರಿನಲ್ಲಿ ಇದೆ ಅಂತ ಹೇಳಿದಿರಿ . ಅಲ್ಲದೆ ಆತ ಸರ್ಕಾರೀ ನೌಕರನಾಗಿರುವುದರಿಂದ ಈ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಪರ್ಮಿಷನ್ ತೆಗೆದುಕೊಂಡಿದ್ದಾನೆಯೇ ? ಅವನು ಇವಕ್ಕೆ ಪರ್ಮಿಷನ್ ತೆಗೆದುಕೊಳ್ಳದೇ ಹೋದ ಮೇಲೆ ಆ ಚೆನೆಂಟೆಡ್ ರ್ಯಾಂಡ್‌ನವನು ಸರ್ಕಾರೀ ನೌಕರನಾಗಿರುವುದರಿಂದ ಆತನು ಬಂದು ಈತನಿಗೆ ಸೇರಿದ ಬಾಳೆಗಿಡಗಳನ್ನು ಕಿತ್ತು ಹಾಕಿದ್ದಕ್ಕಾಗಿ ಅವನ ಮೇಲೆ ಏನಾದರೂ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ಮತ್ತು ಆತನಿಂದ ಈ ಜಮೀನನ್ನು ರಿಸ್ಟೋರ್ ಮಾಡಿಸುವುದಕ್ಕಾಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಚೆನೆಂಟೆಡ್ ರ್ಯಾಂಡ್‌ನಿಂದ ಜಮೀನು ಕೊಡಿಸುವುದು ಆಗಲಿ ಯಾವುದೇ ಆಗಲಿ ಅದು ಟ್ರಿಬ್ಯೂನರ್ ಮುಂದೆ ಇದೆ. ಈ ಬಗ್ಗೆ ತೀರ್ಮಾನ ಆ ಟ್ರಿಬ್ಯೂನರ್ ನವರೇ ತೆಗೆದುಕೊಳ್ಳಬೇಕು. ಅವರಿಗೆ ಈ ಬಗ್ಗೆ ಹೆಚ್ಚಿನ ಅಧಿಕಾರ ಕೊಡಲಾಗಿದೆ. ಆ ವಿಷಯದಲ್ಲಿ ನಾನು ಕೈಹಾಕುವುದಿಲ್ಲ. ಅವರಿಗೆ ಜಮೀನು ಯಾವರೀತಿ ಬಂತು ಮತ್ತು ಅವನ ಮೈನರ್ ಹುಡುಗನ ಹೆಸರಿನಲ್ಲಿ ಜಮೀನು ಮಾಡಿದ್ದರೆ ಅದರ ಬಗ್ಗೆ ಆ ಟ್ರಿಬ್ಯೂನರ್‌ನವರೇ ವಿಚಾರಣೆ ನಡೆಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆ.

SRI N. G. HALAPPA.—May I know if the officer concened has been proved as an accused under the Criminal Procedure Code, and if so under what section ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿವರಗಳು ಈಗ ನನ್ನ ಹತ್ತಿರ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ. —ಸರ್ಕಾರೀ ನೌಕರನ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಕೋರ್ಟಿನಲ್ಲಿ ಛಾರ್ಜ್‌ಷೀಟ್ ಹಾಕಿದ ಮೇಲೆ ಆದು ಇತ್ಯರ್ಥವಾಗುವವರೆಗೂ ಆತನನ್ನು ಸಸ್ಪೆಂಡ್ ಮಾಡುವುದು ಮುಖ್ಯ ಕರ್ತವ್ಯವಲ್ಲವೇ? ಅವನ ಮೇಲೆ ಕೇಸ್ ಹಾಕಿರುವುದರಿಂದ ಇದುವರೆಗೂ ಅವನನ್ನೂ ಏತಕ್ಕೆ ಸಸ್ಪೆನ್ಷನ್‌ನಲ್ಲಿ ಇಡಲಿಲ್ಲ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಸ್ವತ್ತೆ ಬಂದ ಮೇಲೆ ಈ ವಿಷಯ ನನ್ನ ಗಮನಕ್ಕೆ ಬಂದದ್ದು. ನಂತರ ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದೆ. ಅವರು ಈ ಬಗ್ಗೆಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ್‌ನಾರಾಯಣ್.—ಅವನು ಸರ್ಕಾರೀ ನೌಕರನಾಗಿರುವುದರಿಂದ ಅಪರಾಧ ಮಾಡಿರುವುದರಿಂದ ಕೂಡಲೇ ನ್ಯಾಯಬದ್ಧವಾದ ರೀತಿಯಿಂದ ತಕ್ಷಣ ಅವನನ್ನು ಸಸ್ಪೆಂಡ್ ಮಾಡವುದು ನ್ಯಾಯವಲ್ಲವೇ? ಮತ್ತು ಆ ಹರಿಜನರಿಗೆ ಇದರಿಂದ ಏನು ನಷ್ಟವಾಗಿದೆ ಆ ನಷ್ಟವನ್ನ ಕಟ್ಟಿಕೊಡುವುದಕ್ಕೆ ಸರಕಾರದವರು ಪರ್ಯಾಲೋಚನೆ ಮಾಡುತ್ತಾರೆಯೇ?

ಶ್ರೀ ಎನ್. ಹುಚ್ಚಮಾಸಿಗೌಡ.— ಆ ನಷ್ಟವನ್ನು ಸರ್ಕಾರವೇ ಕಟ್ಟಿಕೊಡಬೇಕು ಅಂದರೆ ಅದು ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ ಯಾರು ಅಪರಾಧಿಯಾಗಿರುತ್ತಾರೋ ಆತನ ಮೇಲೆ ಈ ನಷ್ಟವನ್ನು ಹೊರಿಸಬೇಕೇ ಏನಾ ಸರ್ಕಾರವೇ ಕಟ್ಟಿಕೊಂಡುವುದು ಯಾವ ನ್ಯಾಯವೂ ಇಲ್ಲ. ಮತ್ತು ಆದರ ಯೋಚನೆಯೂ ಇಲ್ಲ.

Primary Schools in Dharwar District.

122 SRI B.G. BANAKAR.—(Hirekerur)

Will the Minister for Education be pleased to state.—

(*a*) the total number of primary schools in Dharwar District as on 31st March 1975;

(*b*) the total number of teachers and other stff in all these schools as on 31st March 1975;

(*c*) the total amount of salary, allowances and other emoluments paid to these teachers and others for the year 1974–75 *i e.*, from 1st April 1974 to 30th March 1975?

SRI M. MALLIKARJUNA SWAMY.—(Minister for Education)

(*a*) 2,012.

(*b*) 7,947.

(*c*) Rs. 2,46,39, 63-00 including grant-in-aid to Private Primary Schools.

ಶ್ರೀ ಬಿ.ಜಿ. ಬಣಕಾರ್.—ಸ್ವಾಮಿ, ಎಷ್ಟೋ ಜನ ಶಿಕ್ಷಕರು ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿ ಪರೀಕ್ಷೆಯಲ್ಲಿ ಏನು ಮಾಡುತ್ತಾರೆ ಎಂದರೆ ಆ ಪರೀಕ್ಷೆಯನ್ನು ಅವರೇ ಸೂಪರ್‌ವೈಸ್ ಮಾಡಿ ಅವರೇ ಅದನ್ನು ಕಲೆಕ್ಷನ್ ಮಾಡಿ ಅಂಕಗಳನ್ನು ಹಾಕುತ್ತಾರೆ. ಈ ರೀತಿ ಇರುವುದರಿಂದ ಈ 7ನೇ ತರಗತಿ ಪರೀಕ್ಷೆಯಲ್ಲಿ ದೋಷ ಪೂರಿತವಾದ ತಪ್ಪು ಇರುವುದರಿಂದ ಈ ಪರೀಕ್ಷೆ ಪದ್ಧತಿಯನ್ನು ಬದಲಾವಣೆ ಮಾಡುವುದು ಒಳ್ಳೆಯದಲ್ಲವೇ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಪ್ರಶ್ನೆ ಪರೀಕ್ಷಾ ಪದ್ಧತಿಗೆ ಸಂಬಂಧಪಟ್ಟ ಪ್ರಶ್ನೆ ಅಲ್ಲ.

ಶ್ರೀ ಬಿ.ಜಿ. ಬಣಕಾರ್.—ಧಾರವಾಡ ಹುಬ್ಬಳ್ಳಿ ಕಾರ್ಪೊರೇಷನ್‌ನಲ್ಲಿ ಶಿಕ್ಷಕರು ಏನು ಇದ್ದಾರೆ ಅವರನ್ನು ಗ್ರಾಮಾಂತರ ಪ್ರದೇಶಗಳಿಗೆ ವರ್ಗಾವಣೆ ಮಾಡುತ್ತಾ ಇಲ್ಲ. ಈ ಬಗ್ಗೆ ಏನಾದರೂ ಒಂದು ನಿರ್ಬಂದ ಹಾಕುತ್ತೀರಾ? ಇಲ್ಲದೇ ಹೋದರೆ ಅವರನ್ನು ವರ್ಗಾವಣೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಪ್ರಶ್ನೆಯಲ್ಲಿ ವರ್ಗಾವಣೆಗೆ ಸಂಬಂಧಪಟ್ಟದ್ದು ಉದ್ಭವಿಸುವುದಿಲ್ಲ.